ಜೊತೆಯಲ್ಲಿ ಪಠಿಸಿದರೆ ಹೇಗೆ? ಒಂದೇ ಶ್ರುತಿ, ಒಂದೇ ಓಟ ಒಂದೇ ಓಘ. ಇವು ಮೂರೂ ಸರಿಯಾಗಿದ್ದರೆ ನಮ್ಮ ಪ್ರಯತ್ನ ನ ಭೂತೋ ನ ಭವಿಷ್ಯತಿ ಎಂದೆನಿಸಿತು. ಸೀಡಿ ಸಿದ್ಧವಾಗಿಟ್ಟೆ.

ಈ ಮಧ್ಯೆ ನನ್ನತ್ತಿಗೆಯ ಫೋನ್ ಬಂತು. ಅವರ ದೊಡ್ಡಪ್ಪ ಊರಿನಿಂದ ಬಂದಿದ್ದರಂತೆ. ಅವರಿಗೂ ಇದರಲ್ಲಿ ಪಾಲ್ಗೊಳ್ಳಲು ಆಸಕ್ತಿಯಂತೆ. ಬರಬಹುದೇ ಎಂದು ಕೇಳಿದರು. ಹಿರಿಯರು. ಪಿತೃಸಮಾನರು. ನಾನೇಕೆ ಬೇಡವೆನ್ನಲಿ? ಸಂತೋಷದಿಂದಲೇ ಆಹ್ವಾನಿಸಿದೆ.

ನಿಗದಿಯಾದ ದಿನದಂದು ಎಲ್ಲರೂ ಸಮವಸ್ತ್ರ ಧರಿಸಿ ಅವರವರ ಸ್ಥಳದಲ್ಲಿ ಮೈಕಿನ ಮುಂದೆ ಆಸೀನರಾದರು. ನಾನು ಸೀಡಿಯ ಗುಂಡಿ ಒತ್ತಿದೆ. ಎಂ.ಎಸ್.ರ ಸುಶ್ರಾವ್ಯವಾದ ತುಂಬು ಕಂಠ ಅಲೆಅಲೆಯಾಗಿ ಹರಿಯಿತು.

ಶುಕ್ಲಾಂಬರಧರಂ ವಿಷ್ಣುಂ ಶಶಿವರ್ಣಂ ಚತುರ್ಭುಜಂ
ಪ್ರಸನ್ನವದನಂ ಧ್ಯಾಯೇತ್ ಸರ್ವ ವಿಘ್ನೋಪಶಾಂತಯೇ.

ಎತ್ತರದ ಕಂಚಿನಂತಹ ಶಾರೀರ. ನಾಮಪಾರಾಯಣ ತುಂಬಿ ಹರಿಯಿತು. ಆಕೆ ಗಾನಕೋಕಿಲೆ. ನಾವೋ ಕಾಗೆ ಕಂಠದ ಸಾಮಾನ್ಯರು. ಆರಂಭದಲ್ಲೇ ಎಡವಟ್ಟಾಯಿತು. ಆಕೆಯದು ಐದುವರೆಯೋ ಆರನೇಮನೆಯದೋ ಶ್ರುತಿ.

ನಮ್ಮದು ಒಂದರಿಂದ ಐದರವರೆಗೆ ವೈವಿಧ್ಯಮಯ ಶ್ರುತಿ ಸಂಗಮ! ಕೆಲವರು ಗಂಟಲು ಹರಿದುಕೊಂಡು ಆ ಶ್ರುತಿಗೇರಲು ಹರಸಾಹಸ ಪಡುತ್ತಿದ್ದರೆ ಮಿಕ್ಕವರು ಆ ಸಾಹಸಕ್ಕೆ ಕೈ ಹಾಕದೆ ತಮ್ಮ ದೈವದತ್ತ ಶ್ರುತಿಗೇ ಅಂಟಿಕೊಂಡರು. ಇದೆಲ್ಲಾ ಸಮ್ಮಿಳಿತವಾಗಿ ವಿಚಿತ್ರ ಶಬ್ದಯುದ್ಧಕ್ಕೆ ದಾರಿಮಾಡಿತು. ನನ್ನ ನಾದಿನಿ ಎತ್ತರದ ಶ್ರುತಿ ಮುಟ್ಟಲಾಗದೆ ಕಳ್ಳ ಧ್ವನಿಯಲ್ಲಿ ಅರಚುತ್ತಿದ್ದಾಗ ಎದೆಯಿಂದ ನುಗ್ಗಿ ಬಂದ ಕೆಮ್ಮು ಮೇಲೆಮೇಲೆ ದಾಳಿ ಮಾಡಿ ಕಣ್ಣು ಮೂಗಿನಲ್ಲಿ ಜಲೋದ್ಭವಕ್ಕೆ ಕಾರಣವಾಯಿತು. ಆ ಸಮಯಕ್ಕೆ ಸರಿಯಾಗಿ ನಮ್ಮ ಅಧಿಕಪ್ರಸಂಗಿ ಅನ್ನಪೂರ್ಣಮ್ಮ ಟ್ರೇಯಲ್ಲಿ ಬಿಸಿ ಬಾದಾಮಿಹಾಲಿನ ಲೋಟಗಳನ್ನು ಹಿಡಿದು ವೇದಿಕೆ ಏರಿ ನನ್ನ ನಾದಿನಿಯ ಮುಂದೆ ಹಿಡಿದರು! ಪಾರಾಯಣ ಮುಗಿದ ಮೇಲೆಯೇ ಬಿಸಿ ಹಾಲು ವಿತರಿಸಲು ನಮ್ಮತ್ತೆ ಅಡುಗೆಯಾಕೆಗೆ ಆಜ್ಞೆಮಾಡಿದ್ದರೂ ನಾದಿನಿ ಕೆಮ್ಮಿದೊಡನೆ ಅವರ ಅಧಿಕ ಪ್ರಸಂಗಿತನ ಅಧಿಕಗೊಂಡು ಬಾದಾಮಿಹಾಲು ತಂದೇ ಬಿಟ್ಟಿದ್ದರು! ಬಾದಾಮಿ ಹಾಲೆಂದರೆ ಯಾರಿಗೆ ಬೇಡ? ಸುತ್ತ ಇದ್ದವರೂ ಪಠನ ನಿಲ್ಲಿಸಿ ಕೈನೀಡಿ ಬಿಸಿಹಾಲು ಗುಟುಕತೊಡಗಿದರು. ಸ್ವಲ್ಪಕಾಲ ಸುಬ್ಬುಲಕ್ಷ್ಮಿಯವರು ಏಕಾಂಗಿಯಾದರು. ಬಸ್ಸಿನಿಂದಿಳಿದು ಕಾಫಿ ಗುಟುಕರಿಸುವ ಪ್ರಯಾಣಿಕ ಕಂಡಕ್ಟರ್ ರೈಟ್ ಕೊಟ್ಟೊಡನೆ ಚಲಿಸುವ ಬಸ್ಸಿಗೆ ಓಡೋಡುತ್ತ ಬಂದು ಹತ್ತುವಂತೆ ಹಾಲು ಮುಗಿಸಿ ಒಬ್ಬೊಬ್ಬರಾಗಿ ಸೀಡಿ ಧ್ವನಿಗೆ ತಮ್ಮ ಧ್ವನಿ ಒಟ್ಟುಗೂಡಿಸಿದರು.

ತಲೆ ತಗ್ಗಿಸಿ ಓದುತ್ತಿದ್ದವಳು ಒಮ್ಮೆ ತಲೆ ಎತ್ತಿದೆ. ಮುಂದೆ ಕುಳಿತಿದ್ದ ನನ್ನ ಮಗ ತನ್ನೆರಡೂ ತರ್ಜನಿ ಬೆರಳುಗಳಿಂದ ಕಿವಿ ಮುಚ್ಚಿಕೊಂಡು ಪಠಿಸುತ್ತಿದ್ದಾನೆ! ಕೇಳಿದ್ದಕ್ಕೆ ಬಗ್ಗಿ ನನ್ನ ಕಿವಿಯಲ್ಲುಸುರಿದ. 'ಕೇಳಕ್ಕಾಗ್ತಾಯಿಲ್ಲ. ಅದಕ್ಕೆ ಈ ಉಪಾಯ'. ದೂರ ಕುಳಿತಿದ್ದ ಮಗಳು ಸ್ವಲ್ಪಸ್ವಲ್ಪವೇ ಸರಿಯುತ್ತಾ ಪಕ್ಕ ಬಂದಳು.

'ಅಮ್ಮಾ, ನಿನ್ನತ್ತಿಗೆಯ ದೊಡ್ಡಪ್ಪ ನನ್ನ ಪಕ್ಕ ಕುಳಿತು ಎಲ್ಲರೂ ಎಂಬತ್ತನೆಯ ಶ್ಲೋಕ ಹೇಳುತ್ತಿದ್ದರೆ ಅವರು ಮೂವತ್ತನೆಯ ಶ್ಲೋಕ ಹೇಳುತ್ತಿದ್ದಾರೆ! ಅದ್ರಿಂದ ನನಗೆ ತಪ್ಪಾತ್ತ ಇದೆ' ಎಂದು ದೂರಿದಳು. ಪಾಪ ಆ ದೊಡ್ಡಪ್ಪನಿಗೆ ದನಗಿವುಡು. ಬೇರೆಯವರ ಧ್ವನಿ ಅವರ ಕಿವಿಗೆ ಬಿದ್ದಿದ್ದರೆ ತಾನೇ ಸಹ ಪಠನೆ ಸಾಧ್ಯ? ತಮ್ಮದೇ ಪ್ರತ್ಯೇಕ ಹಾದಿ ಹಿಡಿದು ದೊಡ್ಡ ಧ್ವನಿಯಲ್ಲಿ